ಪದವಿ ಮತ್ತು ಸ್ನಾತಕೋತ್ತರ ಹಂತದಲ್ಲಿ ವಿದ್ಯಾರ್ಥಿಗಳು ವಿಜ್ಞಾನ ಶಿಕ್ಷಣವನ್ನು ಇಂಗ್ಲಿಷಿನಲ್ಲಷ್ಟೇ ಪಡೆಯಬೇಕಾದ ಅನಿವಾರ್ಯ ಸ್ಥಿತಿಯಿರುವುದು ಕಳವಳಕಾರಿ. ಭೌತಶಾಸ್ತ್ರದ ಸ್ಟ್ರಿಂಗ್ ಸಿದ್ಧಾಂತವನ್ನು ಕಲಿಯಲು ಉತ್ಸುಕನಾಗಿರುವ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಯು ಕೇವಲ ಇಂಗ್ಲಿಷ್ ಚೆನ್ನಾಗಿ ಬಾರದ ಕಾರಣಕ್ಕಾಗಿ ಅವಕಾಶವಂಚಿತನಾಗಬಾರದು.

– **ಡಾ. ಕೆ. ವಿಜಯರಾಘವನ್,** ಪ್ರಧಾನ ಮಂತ್ರಿಗಳ ಮುಖ್ಯ ವೈಜ್ಞಾನಿಕ ಸಲಹೆಗಾರರು

ಯೋಚಿಸುವ ಭಾಷೆಯಲ್ಲಿ ಉನ್ನತ ಜ್ಞಾನ ದೊರೆಯುವಂತಾದರೆ...

ದೇಶದ ಅರ್ಥವ್ಯವಸ್ಥೆಯ ಬೆಳವಣಿಗೆಯಲ್ಲಿ ಹೆಚ್ಚಿನ ಜನ ಪಾಲ್ಗೊಳ್ಳಬೇಕಾದರೆ ಅವರು ತಮ್ಮ ನೆಲದ ಭಾಷೆಯಲ್ಲೇ ಶಿಕ್ಷಣವನ್ನು ಪಡೆದು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶಗಳು ಸಿಗುವಂತಾಗಬೇಕು.

ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆಯು ಎಲ್ಲಾ ಮಕ್ಕಳನ್ನೂ ಉತ್ತಮ ನಾಗರಿಕರನ್ನಾಗಿ ರೂಪಿಸುವ ಉದ್ದೇಶವನ್ನು ಹೊಂದಿದೆ. ಮಕ್ಕಳೆಲ್ಲರೂ ಪ್ರಾಥಮಿಕ ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕಾಗಿದೆ. ಇದರರ್ಥ, ಕಲಿಕೆಯ ಹಂತದಲ್ಲಿ ಕೆಲವು ಕಾರಣಗಳಿಂದ ಮಕ್ಕಳನ್ನು ನಿರ್ಲಕ್ಷಿಸಿದರೆ ಅದು ಅವರ ಹಕ್ಕನ್ನು ಕಡೆಗಣಿಸಿದಂತೆ. ವಿಶೇಷ ಅಗತ್ಯವನ್ನುಳ್ಳ ಮಕ್ಕಳನ್ನು ಸಾಮಾನ್ಯ ಮಕ್ಕಳಂತೆ ಕಲಿಕೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ಯಾವ ಪ್ರಯತ್ನಗಳಾಗುತ್ತಿವೆ? ಅಂತಹ ಮಕ್ಕಳನ್ನು ಶಾಲಾಪ್ರಕ್ರಿಯೆಯಲ್ಲಿ ಒಳಗೊಳ್ಳುವ ವಿಷಯದಲ್ಲಿ ಎಷ್ಟರಮಟ್ಟಿಗೆ ಸಮನ್ವಯ ಸಾಧಿಸಿದ್ದೇವೆ?

ಮಂಡ್ಯ ತಾಲೂಕಿನ ಸಮನ್ವಯ ಶಿಕ್ಷಕಿಯೊಬ್ಬರು ಈ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು, ಆಯ್ದ ವಿಶೇಷ ಅಗತ್ಯಗಳನ್ನುಳ್ಳ ಮಕ್ಕಳು, ಪೋಷಕರು ಮತ್ತು ಶಿಕ್ಷಕರನ್ನು ಸಂದರ್ಶಿಸಿ, ಜೊತೆಗೆ ಶಾಲಾ ಭೇಟಿ, ತರಗತಿ ವೀಕ್ಷಣೆಯ ಮೂಲಕ ಕಂಡುಕೊಂಡ ಅಂಶಗಳನ್ನು ವಿಶ್ಲೇಷಿಸಿ, ಅಧ್ಯಯನವೊಂದನ್ನು ಕೈಗೊಂಡಿದ್ದರು.

ಈ ಅಧ್ಯಯನವು ಉಪಯುಕ್ತ ಒಳನೋಟಗಳನ್ನು ಒದಗಿಸುತ್ತದೆ. ಇಂತಹ ಮಕ್ಕಳ ವಿಶೇಷ ಅಗತ್ಯಗಳನ್ನರಿಯಲು ಶಿಕ್ಷಕರು ಅವರಿಗೆ ಪೂರಕ ಭೌತಿಕ ಪರಿಸರ ಮತ್ತು ಕಲಿಕೆಯ ಸಂಪನ್ಮೂಲಗಳನ್ನು ಒದಗಿಸಿ, ಅವರ ಕಲಿಕೆಯನ್ನು ಸುಧಾರಿಸುವ ನಿಟ್ಟಿನಲ್ಲಿ ತಮ್ಮ ಅಭ್ಯಾಸಗಳಲ್ಲಿ ಹೆಚ್ಚಿನ ಪಕ್ವತೆ ಸಾಧಿಸಬೇಕಾದ ಅವಶ್ಯಕತೆಯನ್ನು ಸೂಚಿಸುತ್ತದೆ. ಜೊತೆಗೆ ಪೋಷಕರು ತಮ್ಮ ಮಕ್ಕಳ ಅಗತ್ಯಗಳ ಬಗ್ಗೆ ವೃತ್ತಿಪರರ ಸಹಾಯ ಪಡೆದು ಇನ್ನೂ ಆಳವಾದ ಜ್ಞಾನ ಮತ್ತು ಧನಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕಾದುದರ ಬಗ್ಗೆಯೂ ಬೆಳಕು ಚೆಲ್ಲುತ್ತದೆ.

ಶಿಕ್ಷಕರ ಅಸ್ಮಿತೆಯು ಪ್ರಾಥಮಿಕ ಶಿಕ್ಷಣದ ಇನ್ನೊಂದು ಮುಖ್ಯ ಆಯಾಮ. ಈ ವಿಷಯದಲ್ಲಿ ಶಿರಾ ತಾಲೂಕಿನ ಶಿಕ್ಷಣ ಸಂಯೋಜಕರೊಬ್ಬರು ಇನ್ನೊಂದು ಅಧ್ಯಯನವನ್ನು ಕೈಗೊಂಡಿದ್ದರು. ಶಿಕ್ಷಕರು ತಮ್ಮನ್ನು ತಾವೇ ಹೇಗೆ ಗುರುತಿಸಿಕೊಳ್ಳುತ್ತಿದ್ದಾರೆ? ಅವರ ಪ್ರಸ್ತುತ ಆಚರಣೆಗಳು ಅಸ್ಮಿತೆಯನ್ನು ಗುರುತಿಸಿಕೊಳ್ಳಲು ಹೇಗೆ ನೆರವಾಗಿವೆ ಅಥವಾ ತೊಡಕಾಗಿವೆ? ಅವರ ವೃತ್ತಿ ಒಲವು ಮತ್ತು ದೃಷ್ಟಿಕೋನಗಳು ಅವರ ಮಾತು ಮತ್ತು ಕೃತಿಗಳಲ್ಲಿ ಹೇಗೆ ವ್ಯಕ್ತಗೊಳ್ಳುತ್ತಿವೆ? ಈ ಪ್ರಶ್ನೆಗಳನ್ನಿರಿಸಿಕೊಂಡು ಶಿಕ್ಷಕರ ಅಭಿಪ್ರಾಯ, ಅನುಭವಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿ, ಸಂಶೋಧನಾ ಲೇಖನವನ್ನು ಪ್ರಸ್ತುತಪಡಿಸಿದ್ದರು. ಇವು ಹೊರಗೆಡಹಿದ ಅಂಶಗಳು ಶಿಕ್ಷಣದ ಇಂದಿನ ಸ್ಥಿತಿಯ ಬಗ್ಗೆ ಯೋಚಿಸುವಂತಹದ್ದಾಗಿವೆ. ಶಿಕ್ಷಕ ವೃತ್ತಿಯನ್ನು ಇಷ್ಟಪಟ್ಟು ಬರುತ್ತಿರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಬಹುತೇಕ ಜನರು ಈ ವೃತ್ತಿಯನ್ನು ಆಕಸ್ಮಿಕವಾಗಿ ಆಯ್ದುಕೊಂಡಿದ್ದಾರೆ. ಶಿಕ್ಷಕರಿಂದ ಸಮಾಜವು ಇರಿಸಿಕೊಂಡಿರುವ ನಿರೀಕ್ಷೆಗಳಿಗೂ ಶಿಕ್ಷಕರ ವೈಯಕ್ತಿಕ ನಿರೀಕ್ಷೆಗಳಿಗೂ ಸಾಮ್ಯತೆಗಳಿಲ್ಲ. ಶಿಕ್ಷಕರ ಸಂಘಗಳು ಶೈಕ್ಷಣಿಕ ವಿಷಯಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟು ಶಿಕ್ಷಕರ ಅಸ್ಮಿತೆ ಉಳಿಸಿಕೊಳ್ಳುವಲ್ಲಿ ಮಹತ್ತರ ಪಾತ್ರ ವಹಿಸಬೇಕಾಗಿದೆ. ಇತರ ವೃತ್ತಿಗಳೊಂದಿಗೆ ತಮ್ಮನ್ನು ಹೋಲಿಸಿಕೊಂಡು ಶಿಕ್ಷಕರು ಕೀಳರಿಮೆಯಿಂದ ಗುರುತಿಸಿಕೊಳ್ಳುತ್ತಿದ್ದಾರೆ. ಎಲ್ಲ ಒತ್ತಡಗಳ ನಡುವೆಯೂ ವೃತ್ತಿಪ್ರೀತಿಯನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಇಂತಹ ಕೆಲವು ಹೊಳಹುಗಳು ನಿಜಕ್ಕೂ ಗಮನ ಸೆಳೆಯುತ್ತವೆ.

'ಶಾಲಾ ಶಿಕ್ಷಣದ ಪ್ರಸಕ್ತ ಸನ್ನಿವೇಶದಲ್ಲಿ ಶಿಕ್ಷಕರು' ಎಂಬ ವಿಷಯದ ಬಗ್ಗೆ ಕಳೆದ ತಿಂಗಳು ಮೈಸೂರಿನಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣವೊಂದು ನಡೆಯಿತು. ಅದರ ಭಾಗವಾಗಿ ಕನ್ನಡದಲ್ಲಿಯೇ ಮಂಡಿತವಾದ ಎಪ್ಪತ್ತೆರಡು ಲೇಖನಗಳಲ್ಲಿ ಮೇಲಿನ ಎರಡು ಉದಾಹರಣೆಗಳೂ ಇದ್ದವು. ಇಪ್ಪತ್ತೂ ್ಮರು ಜಿಲ್ಲೆಗಳಿಗೆ ಸೇರಿದ, ಸರಕಾರಿ ಮತ್ತು ಖಾಸಗಿ ಶಾಲೆಗಳ, ವಿಶ್ವವಿದ್ಯಾಲಯಗಳ ಶಿಕ್ಷಕರು, ಶಿಕ್ಷಕ ಶಿಕ್ಷಕರು, ಶೈಕ್ಷಣಿಕ ಅಧಿಕಾರಿಗಳು ಹಾಗೂ ಸ್ವಯಂಸೇವಾ

ಸಂಸ್ಥೆಗಳ ಸದಸ್ಯರು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಈ ವಿಚಾರ ಸಂಕಿರಣವು ಎರಡು ಉದ್ದೇಶಗಳಿಗಾಗಿ ಮುಖ್ಯವಾಗಿತ್ತು. ಮೊದಲನೆಯದು, ಮಂಡನೆಯಾದ ಉತ್ತಮ ಲೇಖನಗಳನ್ನು ಆಯ್ಕೆ ಮಾಡಿ ಪುಸ್ತಕ ರೂಪದಲ್ಲಿ ಪ್ರಕಟಿಸಿ ಶಿಕ್ಷಣ ಕ್ಷೇತ್ರದಲ್ಲಿ ಪದವಿ, ಸ್ನಾತಕೋತ್ತರ ವಿದ್ಯಾರ್ಥಿಗಳು, ಶಿಕ್ಷಕರಿಗೆ ಲಭ್ಯವಾಗುವಂತೆ ಮಾಡುವುದು, ಆ ಮೂಲಕ ಕನ್ನಡದಲ್ಲಿ ಗುಣಮಟ್ಟದ ಸಂಪನ್ಮೂಲದ ಕೊರತೆಯನ್ನು ಸ್ವಲ್ಪ ಮಟ್ಟಿಗಾದರೂ ತುಂಬುವುದು. ಎರಡನೆಯದು, ಶಾಲಾ ಶಿಕ್ಷಣದ ಸುತ್ತ ಅರ್ಥಪೂರ್ಣ ಸಂವಾದವನ್ನೇರ್ಪಡಿಸಿ ಈ ಮೂಲಕ ಬಹುವಿಧ ಸಂವೇದನೆ, ಅನುಭವಗಳನ್ನು ಹೊಸ ಜ್ಞಾನಸೃಷ್ಟಿಗೆ ಬಳಸುವುದು.

ವಿಚಾರ ಸಂಕಿರಣದ ಅಧಿವೇಶನಗಳು ಆಸಕ್ತಿದಾಯಕವಾಗಿದ್ದವು. ಅದಕ್ಕೆ, ಶಿಕ್ಷಕರು ಸ್ವಂತ ವಿಚಾರಶಕ್ತಿಯಿಂದ ಆಲೋಚಿಸಿ ಜ್ಞಾನಸೃಷ್ಟಿಯ ಪ್ರಯತ್ನದಲ್ಲಿ ತೊಡಗಿಕೊಂಡಿದ್ದುದೇ ಕಾರಣವಾಗಿತ್ತು. ಇಂಗ್ಲಿಷಿನಲ್ಲಿ ಲೇಖನ ಬರೆದು ಪ್ರಸ್ತುತಪಡಿಸಲು ಕೇಳಿದ್ದರೆ ಇಂಥ ಸ್ವಂತಿಕೆ ಸಾಧ್ಯವಾಗುತ್ತಿರಲಿಲ್ಲ. ಇಂಥ ಚಿಂತನ–ಮಂಥನವು ಕನ್ನಡದಲ್ಲಿ ನಡೆಯುವ ಅವಶ್ಯಕತೆ ಏನು? ಉನ್ನತ ಶಿಕ್ಷಣ ಹಂತದಲ್ಲಿ ಕನ್ನಡದಂತಹ ಭಾರತೀಯ ಭಾಷೆಗಳಲ್ಲಿ ಅನುವಾದ ಮತ್ತು ಸಾಹಿತ್ಯ ರಚನೆ ಪ್ರಸ್ತುತವೇ? ಅದರಲ್ಲೂ ಇಂಗ್ಲಿಷ್ ಮೂಲಕವೇ ಭವಿಷ್ಯ ಕಟ್ಟಿಕೊಳ್ಳಬೇಕೆಂಬ ದೃಢನಂಬಿಕೆಯನ್ನು ಬಹುಜನರು ತಳೆದಿರುವ ಸಂದರ್ಭದಲ್ಲಿ ಇಂತಹ ಪ್ರಯತ್ನಗಳು ಎಷ್ಟು ಸಾರ್ಥಕವಾಗಬಲ್ಲವು?

ಇವತ್ತಿಗೂ ಉನ್ನತ ಶಿಕ್ಷಣವನ್ನು ಅರಸಿ ಬರುತ್ತಿರುವ ಗ್ರಾಮಾಂತರ ಮತ್ತು ಅರೆನಗರ ಪ್ರದೇಶಗಳ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಇಲ್ಲವೇ ಪ್ರೌಢಶಾಲೆಗಳಲ್ಲಿ ಕನ್ನಡ ಅಥವಾ ಇತರ ಭಾರತೀಯ ಭಾಷಾಮಾಧ್ಯಮದಲ್ಲಿಯೇ ಕಲಿಯುತ್ತಿದ್ದಾರೆ. ಬಹುತೇಕ ಇಂಗ್ಲಿಷ್ ಮಾಧ್ಯಮದ ಶಾಲೆ–ಕಾಲೇಜುಗಳಲ್ಲಿ ಇಂಗ್ಲಿಷನ್ನು ಸರಿಯಾಗಿ ಕಲಿಯುವ ವಾತಾವರಣವಿಲ್ಲ. ಮೂಲ ವಿಷಯಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಸುತ್ತೇವೆಂದು ಹೇಳಿಕೊಳ್ಳುತ್ತ ವಿದ್ಯಾರ್ಥಿಗಳನ್ನು ತಮ್ಮತ್ತ ಸೆಳೆಯುವ ಹಲವು ಖಾಸಗಿ ಶಾಲೆಗಳು ಮೇಲ್ನೋಟಕ್ಕೆ ಇಂಗ್ಲಿಷ್ ಬಳಕೆ ಮಾಡುತ್ತ ವಾಸ್ತವದಲ್ಲಿ ಕನ್ನಡ ಭಾಷೆಯನ್ನೇ ಬಳಸುತ್ತಿರುವುದನ್ನು ನೋಡುತ್ತಿದ್ದೇವೆ. ಈ ಸ್ಥಿತಿಗೆ ಹಲವು ಕಾರಣಗಳಿವೆ. ಮುಖ್ಯವಾದದ್ದು, ಪರಿಕಲ್ಪನೆಗಳನ್ನು ಇಂಗ್ಲಿಷಿನಲ್ಲಿ ಅರ್ಥೈಸಿಕೊಂಡು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಬೋಧಿಸಬಲ್ಲ ಸಮರ್ಥ ಶಿಕ್ಷಕರ ಕೊರತೆ. ಭಾರತೀಯ ಭಾಷೆಗಳಲ್ಲಿ ಉತ್ತಮ ಗುಣಮಟ್ಟದ ಕಲಿಕೆಯ ಸಂಪನ್ಮೂಲಗಳಿಲ್ಲದಿರುವುದು ಈ ಅಂಶವನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತದೆ. ವ್ಯಕ್ತಿಯು ಸ್ವಂತ ಭಾಷೆಯಲ್ಲಿ ಆಲೋಚಿಸಿದಾಗ ಮಾತ್ರ ತನ್ನ ಪರಿಕಲ್ಪನಾ

ಚೌಕಟ್ಟನ್ನು ಪರಿಣಾಮಕಾರಿಯಾಗಿ ಬಳಸಬಲ್ಲ. ಮನೆ ಮತ್ತು ಪರಿಸರದಲ್ಲಿ ಬಳಸುವ ಭಾಷೆಗಳಲ್ಲೇ ನಮ್ಮ ಮೂಲ ಪರಿಕಲ್ಪನಾ ಸಂರಚನೆ ಸಿದ್ಧಗೊಂಡಿರುತ್ತದೆ. ತರಗತಿಯಲ್ಲಿ ತಾನು ಅರ್ಥೈಸಿಕೊಳ್ಳುವ ಮತ್ತು ಆಪ್ತವಾಗಿ ಸಂಬಂಧಿಸಿಕೊಳ್ಳುವ ಭಾಷೆಯಲ್ಲೇ ಬೋಧನಾ ಪ್ರಕ್ರಿಯೆ ನಡೆದಾಗ ಆ ವಿದ್ಯಾರ್ಥಿಯು ಕಲಿಕೆಯನ್ನು ತನ್ನದಾಗಿಸಿಕೊಂಡು ಆತ್ಮವಿಶ್ವಾಸದಿಂದ ಮುನ್ನಡೆಯಲು ಸಾಧ್ಯವಾಗುವುದು.

ಪರಿಕಲ್ಪನಾತ್ಮಕವಾಗಿ ಸಮೃದ್ಧವೂ ಸೂಕ್ಷ್ಮವೂ ಆದ ದೃಷ್ಟಿಕೋನಗಳನ್ನು ಒದಗಿಸುವ ಸಂಪನ್ಮೂಲಗಳಿಂದ ವಂಚಿತರಾದ ವಿದ್ಯಾರ್ಥಿಗಳು ಬೇರೆ ದಾರಿಯಿಲ್ಲದೆ ತೀವ್ರ ವಿರೋಧಾಭಾಸಗಳಿಂದ ಕೂಡಿದ, ತಪ್ಪು ಕಲ್ಪನೆಗಳನ್ನು ಎತ್ತಿ ಹಿಡಿಯುವ ಅರೆಬೆಂದ ಜನಪ್ರಿಯ ಜ್ಞಾನಮೂಲಗಳಿಗೆ ಮೊರೆಹೋಗುತ್ತಾರೆ. ಇಂಗ್ಲಿಷ್ ಮಾತನಾಡುವ ಜನರಿಗೆ ಕೈಗೆಟುಕುವ ಪರಿಕಲ್ಪನಾತ್ಮಕ ಸಂರಚನೆಗಳು, ವಿಚಾರಗಳಿಂದ ದೂರವುಳಿಯುವ ಈ ವಿದ್ಯಾರ್ಥಿಗಳು ವಿಶಾಲ ಜಗತ್ತಿನ ದೃಷ್ಟಿಯಿಂದ ಒಪ್ಪಿತ ಜ್ಞಾನವೆಂದು ಪರಿಗಣಿಸಲ್ಪಡುವ ಚೌಕಟ್ಟಿನಲ್ಲಿ ತಮ್ಮ ಅನುಭವಗಳನ್ನು ಒರೆಗೆ ಹಚ್ಚಲಾರದೆ ಹಿಂದೆ ಬೀಳುತ್ತಾರೆ. ಈ ಹಿನ್ನೆಲೆಯಿಂದ ಪರಿಕಲ್ಪನಾತ್ಮಕವಾಗಿ ಸದೃಢವಾದ ಆಯ್ದ ಸಂಪನ್ಮೂಲಗಳನ್ನು ಭಾರತೀಯ ಭಾಷೆಗಳಿಗೆ ಅನುವಾದಿಸಿ ಪದವಿ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಹೆಚ್ಚು ಜನರಿಗೆ ತಲುಪಿಸುವ ಮಹತ್ತರ ಶೈಕ್ಷಣಿಕ ಕೆಲಸವನ್ನು ಕೈಗೊಳ್ಳಬೇಕಾಗಿದೆ.

ಪ್ರಧಾನಿಗಳ ಮುಖ್ಯ ವೈಜ್ಞಾನಿಕ ಸಲಹೆಗಾರರು ಮತ್ತು ಪ್ರಸಿದ್ಧ ಜೀವಶಾಸ್ತ್ರಜ್ಞರಾದ ಡಾ. ಕೆ. ವಿಜಯರಾಘವನ್ ಅವರು ಪದವಿ ಮತ್ತು ಸ್ನಾತಕೋತ್ತರ ಹಂತದಲ್ಲಿ ವಿದ್ಯಾರ್ಥಿಗಳು ವಿಜ್ಞಾನ ಶಿಕ್ಷಣವನ್ನು ಇಂಗ್ಲಿಷಿನಲ್ಲಿಯೇ ಪಡೆಯಬೇಕಾದ ಅನಿವಾರ್ಯ ಸ್ಥಿತಿಯಿರುವುದರ ಬಗ್ಗೆ ಇತ್ತೀಚೆಗೆ ಕಳವಳ ವ್ಯಕ್ತಪಡಿಸಿದ್ದಾರೆ. ಭೌತಶಾಸ್ತ್ರದ ಪ್ರಸಿದ್ಧ ಸ್ಟ್ರಿಂಗ್ ಸಿದ್ಧಾಂತವನ್ನು ಕಲಿಯಲು ಉತ್ಸುಕನಾಗಿರುವ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಯು ಕೇವಲ ಇಂಗ್ಲಿಷ್ ಚೆನ್ನಾಗಿ ಬಾರದ ಕಾರಣಕ್ಕಾಗಿ ಅವಕಾಶ ವಂಚಿತನಾಗಬಾರದು ಎಂದಿರುವುದು ಗಮನಾರ್ಹ. ಈ ಹೇಳಿಕೆಯ ಬೆನ್ನಲ್ಲೇ ಕೇಂದ್ರ ಸಾಹಿತ್ಯ ಅಕಾಡೆಮಿಯ ಸಾರಥ್ಯ ವಹಿಸಿರುವ ಸಾಹಿತಿ ಚಂದ್ರಶೇಖರ ಕಂಬಾರರೂ ಸಹ ವಿಜ್ಞಾನದ ಪುಸ್ತಕಗಳನ್ನೂ ಒಳಗೊಂಡಂತೆ ಶೈಕ್ಷಣಿಕ ಸಂಪನ್ಮೂಲಗಳ ಅನುವಾದ ಪ್ರಕ್ರಿಯೆಗೆ ಚಾಲನೆ ನೀಡಬೇಕಾಗಿದೆಯೆಂದು ಹೇಳಿರುವುದು ಮಹತ್ತರ ಬೆಳವಣಿಗೆ. ಈ ಹಿನ್ನೆಲೆಯಲ್ಲಿ ರಾಜ್ಯ ಪದವಿಪೂರ್ವ ಶಿಕ್ಷಣ ಇಲಾಖೆಯು ವಿಜ್ಞಾನದ ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಒದಗಿಸಲು ಮುಂದಾಗಿರುವುದು ಶ್ಲಾಘನೀಯ. ಇತರ ವಿಷಯಗಳಿಗೂ ಈ ಪ್ರಕ್ರಿಯೆ ಅನ್ವಯವಾಗುವುದು ಅಗತ್ಯ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ನಿಟ್ಟಿನಲ್ಲಿ ಯೋಚಿಸತೊಡಗಿರುವುದು ಸ್ವಾಗತಾರ್ಹ. ಲಾಭರಹಿತ ಉದ್ದೇಶದ ಇಂತಹ ಯೋಜನೆಗಳಿಗೆ ಪ್ರಕಾಶಕರಿಂದ ಅನುಮತಿ ದೊರಕಿಸಿಕೊಡುವುದು ಅಗತ್ಯ. ಜೊತೆಗೆ, ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ಗ್ರಂಥಾಲಯಗಳ ಮೂಲಕ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಅನುವಾದಿತ ಸಂಪನ್ಮೂಲಗಳು ಸುಲಭವಾಗಿ ತಲುಪುವಂತೆ ಮಾಡಲು ಸರಕಾರಗಳು ಮುಂದಾಗುವುದು ಅವಶ್ಯಕ. ನಮ್ಮ ದೇಶವು ಜ್ಞಾನಾಧಾರಿತ, ಸ್ವಾವಲಂಬಿ ಅರ್ಥವ್ಯವಸ್ಥೆಯಾಗಬೇಕೆಂದು ಅಪೇಕ್ಷಿಸುತ್ತಿರುವ ಸನ್ನಿವೇಶದಲ್ಲಿ ಅರ್ಥವ್ಯವಸ್ಥೆಯ ಬೆಳವಣಿಗೆಯಲ್ಲಿ ಹೆಚ್ಚಿನ ಜನರನ್ನು ಒಳಗೊಳ್ಳಬೇಕಾದರೆ ಅವರಿಗೆ ಅವರ ಭಾಷೆಯಲ್ಲೇ ಶಿಕ್ಷಣವನ್ನು ಪಡೆಯಲು ಅವಕಾಶಗಳು ಇರಬೇಕು. ಎಲ್ಲರಿಗೂ ಸಮಾನ ಅವಕಾಶ ಸಿಕ್ಕಾಗಲೇ ನ್ಯಾಯಯುತ ಮತ್ತು ಮಾನವೀಯ ಸಮಾಜದ ನಿರ್ಮಾಣಕ್ಕೆ ನಿಜವಾದ ಅರ್ಥ ಬರುತ್ತದೆ.

ವಿಜಯ ಕರ್ನಾಟಕ, 07–06–2018

